2016 ಕ.ತೀ.ವ 866

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

## ಮಹದೇವಪ್ಪ ಮೃತರಾಗಿರುವುದರಿಂದ ಇವರ ಕಾನೂನು ಸಮ್ಮತ ವಾರಸುದಾರರು –ವಿರುದ್ಧ– ಉದಯ ಕುಮಾರ್*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ.

ನಿಯತ ಎರಡನೇ ಅಪೀಲು

ಸ್ವತ್ತುಗಳ ವರ್ಗಾವಣೆ ಅಧಿನಿಯಮ, 1882ರ 48ನೇ ಪ್ರಕರಣ.

ಅಧಿಭೋಗಿಸುತ್ತಿದ್ದ ಸ್ವತ್ತಿನ ಘೋಷಣೆ ಮತ್ತು ಆಜ್ಞಾಪಕ ನಿರ್ಬಂಧಕಾಜ್ಞೆಗೆ ಮತ್ತು ಸ್ವತ್ತನ್ನು ಮತ್ತು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದ ದಾವೆಯನ್ನು ವಜಾಗೊಳಿಸಿರುವ ಡಿಕ್ರಿ ಮತ್ತು ಪ್ರತಿವಾದಿ ಸಂ.1ರ ಹೆಸರಿನಲ್ಲಿ ನೀಡಿದ ಶಾಶ್ವತ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಿರುವುದಕ್ಕೆ ಸಂಬಂಧಿಸಿದ ಡಿಕ್ರಿಗಳಿಂದ ಬಾಧಿತರಾದವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಇವರೀರ್ವರೂ ಎರಡನೇ ಅಪೀಲುಗಳನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿ ಸಂ.1ರ ಹೆಸರಿನಲ್ಲಿ 15.12.98ರಂದು ದಾವಾ ಸ್ವತ್ತನ್ನು ವರ್ಗಾವಣೆ ಮಾಡಿ ತೊಂದರೆಗೆ ಒಳಗಾಗಿರುವ ಪ್ರತಿವಾದಿ ಸಂ.2, ಸ್ವಾಮ್ಯದ ಮೂಲ ಪತ್ರ ಹಾಗೂ ಸ್ವತ್ತಿನ ಅಧಿಭೋಗವನ್ನು ಬಿಟ್ಟುಕೊಟ್ಟಿರುತ್ತಾನೆ. ವಾದಿಯು ಇದೇ ಸ್ವತ್ತಿನ ಸಂಬಂಧದಲ್ಲಿ 25.4.2000ದಂದು ಜಾರಿಗೊಳಿಸಿದ ತರುವಾಯದ ಕ್ರಯಪತ್ರದ ಅನುಸರಣೆಯಲ್ಲಿ ಸ್ವಾಮ್ಯ ಅಥವಾ ಅಧಿಭೋಗವನ್ನು ಆರ್ಜಿಸಿಕೊಳ್ಳಲಾಗುವುದಿಲ್ಲ. ಪ್ರತಿವಾದಿ ಸಂ.1 ಈಗಾಗಲೇ, ದಾವಾ ಸ್ವತ್ತಿನಲ್ಲಿ ಹಕ್ಕು, ಸ್ವಾಮ್ಯ ಹಾಗೂ ಹಿತಾಸಕ್ತಿಯನ್ನು ಹೊಂದಿರುವುದರಿಂದ ವಾದಿಯ ಹೆಸರಿನಲ್ಲಿ ಅಂದರೆ ಸದರಿ ಸ್ವತ್ತಿನ ಸಂಬಂಧದಲ್ಲಿ

*ನಿಯತ ಎರಡನೇ ಅಪೀಲು ಸಂ. 7512/2010 ಇದರೊಂದಿಗೆ ಇತರೆ, ದಿನಾಂಕ: 24ನೇ ನವೆಂಬರ್, 2015.

**25.4.2000ದಂದಿನ ಕ್ರಯಪತ್ರದ ಅನುಷ್ಠಾನಗೊಳಿಸಿರುವುದು ವಾದಿಯಲ್ಲಿ ಯಾವುದೇ ಕಾನೂನಾತ್ಮಕ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಪ್ರದತ್ತಗೊಳಿಸಿರುವುದಿಲ್ಲ ಎಂದು ಅಭಿಪ್ರಾಯಪಟ್ಟು ಉಚ್ಚ ನ್ಯಾಯಾಲಯವು ನಿಯತ ಎರಡನೇ ಅಪೀಲುಗಳನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ: ಶ್ರೀ ಅಶೋಕ್ ಎಸ್. ಕಿಣಗಿ, ವಕೀಲರು,
ಪ್ರತ್ಯರ್ಜಿದಾರರ ಪರ: ಶ್ರೀ ಅಮಿತ್ ಕುಮಾರ್ ದೇಶಪಾಂಡೆ, ವಕೀಲರು,
ಎರಡನೇ ಪ್ರತ್ಯರ್ಜಿದಾರರಿಗೆ ಆರ್‌ಎಸ್‌ಎ ಸಂ. 7511/2010ರಲ್ಲಿ ದಿನಾಂಕ 6–11–2015ರನ್ವಯ ನೋಟೀಸ್‌ನ್ನು ಜಾರಿಗೊಳಿಸಿದೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಯಾದಗಿರಿಯ ಹಿರಿಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ ಸಾಮಾನ್ಯ ತೀರ್ಪು ಮತ್ತು ಪ್ರತ್ಯೇಕ ಡಿಕ್ರಿಗಳಿಂದ ಅಂದರೆ ವಾದಿಯು ಅಧಿಭೋಗಿಸುತ್ತಿದ್ದ ಸ್ವತ್ತಿನ ಘೋಷಣೆ ಮತ್ತು ಆಜ್ಞಾಪಕ ನಿರ್ಬಂಧಕಾಜ್ಞೆಗೆ ಮತ್ತು ಸ್ವತ್ತನ್ನು ಮತ್ತು ಹಿಂದಕ್ಕೆ ಪಡೆಯುವುದಕ್ಕೆ ಸಂಬಂಧಿಸಿದ ದಾವೆಯನ್ನು ವಜಾಗೊಳಿಸಿರುವ ಡಿಕ್ರಿ ಮತ್ತು ಪ್ರತಿವಾದಿ ಸಂ.1ರ ಹೆಸರಿನಲ್ಲಿ ನೀಡಿದ ಶಾಶ್ವತ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಿರುವುದಕ್ಕೆ ಸಂಬಂಧಿಸಿದ ಡಿಕ್ರಿಗಳಿಂದ ಬಾಧಿತರಾದವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಇವರೀರ್ವರೂ ಎರಡನೇ ಅಪೀಲುಗಳನ್ನು ಸಲ್ಲಿಸಿರುತ್ತಾರೆ.

2. ಪ್ರತಿವಾದಿ ಸಂ.2 – ಶ್ರೀಯುತ ಮ್ಯಾಥ್ಯೂ, ಯಾದಗಿರಿ (ಬಿ)ಯ 150/1 ಎಂಬ ಸರ್ವೆ ನಂಬರನ್ನು ಹೊಂದಿರುವ ಜಮೀನಿನಲ್ಲಿನ ಫ್ಲಾಟ್ ಸಂಖ್ಯೆ 2ರ ಒಡೆಯನಾಗಿರುತ್ತಾನೆ. ಈತ ವಾದಿ – ಮಹದೇವಪ್ಪನ ಹೆಸರಿನಲ್ಲಿ 23.7.1998ನೇ ದಿನಾಂಕದಂದು ಮಾರಾಟದ ಒಪ್ಪಂದವನ್ನು ಮಾಡಿಕೊಂಡಿರುತ್ತಾನೆ. ಸ್ವತ್ತಿನ

ಕ್ರಯಪತ್ರವನ್ನು 25.04.2000ದಂದು ಬರೆದುಕೊಂಡು, ನೋಂದಣಿ ಮಾಡಿಸಲಾಗಿರುತ್ತದೆ. ದಾವಾ ಸ್ವತ್ತಿನ ಅಧಿಭೋಗವು ವಾದಿಯೊಂದಿಗೆ ಇದೆಯೆಂದು ವಾದಿಸಿ ಹಾಗೂ ಪ್ರತಿವಾದಿ ಸಂ.1 ಸುಳ್ಳು ದಾವೆ ಸಲ್ಲಿಸಿ, ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮಧ್ಯಕಾಲೀನ ಏಕಪಕ್ಷೀಯ ಆದೇಶವನ್ನು ಪಡೆದುಕೊಂಡು, ಬಲವಂತದಿಂದ ಅಧಿಭೋಗವನ್ನು ಪಡೆದುಕೊಂಡು ಸದರಿ ಪ್ಲಾಟ್‌ನಲ್ಲಿ ಕೊಠಡಿಯನ್ನು ನಿರ್ಮಿಸಿರುತ್ತಾರೆಂದು ಆಪಾದಿಸಿ, ಯಾದಗಿರಿಯ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯದಲ್ಲಿ, ವಾದಿಯು ದಾವಾ ಸ್ವತ್ತಿನ ನಿರುಪಾಧಿಕ ಒಡೆಯನೆಂದೂ, ದಾವಾ ಸ್ವತ್ತಿನ ಮೇಲೆ ಪ್ರತಿವಾದಿ ಸಂ.1ನ್ನು ವಾದಿಯ ಅಧಿಭೋಗಕ್ಕೆ ಅಡೆತಡೆ ಮಾಡುವುದರಿಂದ ಶಾಶ್ವತವಾಗಿ ನಿರ್ಬಂಧಿಸಿ, ಪ್ರತಿವಾದಿ ಸಂ.1 ಈತನಿಗೆ, ದಾವ ಸ್ವತ್ತಿನಲ್ಲಿ ನಿರ್ಮಾಣ ಮಾಡಿರುವ ಕಾನೂನು ಬಾಹಿರ ನಿರ್ಮಿತಿಯನ್ನು ತೆಗೆದುಹಾಕಲು ಆಜ್ಞಾಪಕ ನಿರ್ಬಂದಕಾಜ್ಞೆಯನ್ನು ನಿರ್ದೇಶಿಸಿ, ವಾದಿಗೆ ಸ್ವತ್ತನ್ನು ಹಿಂತಿರುಗಿಸಿಕೊಡಬೇಕೆಂಬ ಘೋಷಣೆಯ ಡಿಕ್ರಿಯನ್ನು ಹೊರಡಿಸುವಂತೆ ಒ.ಎಸ್.ಸಂ.49/2000ನ್ನು ಸಲ್ಲಿಸಲಾಗಿರುತ್ತದೆ.

3. ಉದಯ್ ಕುಮಾರ್ – ಪ್ರತಿವಾದಿ ಸಂ.1, ನೊಂದಾಯಿತ ಕ್ರಯಪತ್ರದಡಿಯಲ್ಲಿ ಪ್ರತಿವಾದಿ ಸಂ.2 ಇವರಿಂದ 15.12.1998ರಂದು ಸದರಿ ಪ್ಲಾಟ್ ಅನ್ನು ಖರೀದಿಸಿದ್ದು, ಈತನ ಹೆಸರನ್ನು ಪುರಸಭೆಯ ದಾಖಲೆಗಳಲ್ಲಿ ಬದಲಾಯಿಸಲಾಗಿರುತ್ತದೆ . ಈತ ದಾವಾ ಸ್ವತ್ತಿನ ಮೇಲೆ ಮನೆ ನಿರ್ಮಿಸಲು 17.3.1999ರಂದು ಅನುಮತಿಯನ್ನು ಪಡೆದುಕೊಂಡಿರುತ್ತಾನೆ. ಇವನು, 2000ದ ಮಾರ್ಚ್‌ನಲ್ಲಿ ನಿರ್ಮಾಣವನ್ನು ಆರಂಭಿಸಿದಾಗ, ಮಹದೇವಪ್ಪ – ವಾದಿಯು ಶಾಂತಿಯುತವಾಗಿ ನಿರ್ಮಾಣ ಕಾರ್ಯ ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ಕಾರಣವಾದ ಅಡೆತಡೆಯ ಹಿನ್ನೆಲೆಯಲ್ಲಿ, ಸದರಿ ದಾವೆಯನ್ನು ಗುಲ್ಬರ್ಗಾದಲ್ಲಿನ ರಜೇಕಾಲೀನ ಪೀಠದಲ್ಲಿ ಸಲ್ಲಿಸಿರುತ್ತಾನೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮಧ್ಯಕಾಲೀನ ಆದೇಶವನ್ನು ಹೊರಡಿಸಲಾಗಿರುತ್ತದೆ. ನ್ಯಾಯಾಲಯಗಳು ಪುನರ್ ಆರಂಭವಾದಾಗ ದಾವೆಯನ್ನು ಯಾದಗಿರಿಯಲ್ಲಿನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ ವರ್ಗಾವಣೆ

ಮಾಡಲಾಗಿರುತ್ತದೆ ಹಾಗೂ ಒ.ಎಸ್.ಸಂಖ್ಯೆ 53/2000 ಎಂದು ನೋಂದಣಿ ಮಾಡಲಾಗಿರುತ್ತದೆ. ಸದರಿ ದಾವೆಯಲ್ಲಿ, ಶಾಶ್ವತ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ಮಹದೇವಪ್ಪ ಅಂದರೆ ವಾದಿಯ ವಿರುದ್ಧ ಒ.ಎಸ್.ಸಂ.53/2000 ಎಂದು ನೋಂದಣಿ ಮಾಡಲಾಗಿರುತ್ತದೆ. ಸದರಿ ದಾವೆಯಲ್ಲಿ, ಶಾಶ್ವತ ನಿರ್ಬಂಧಕಾಜ್ಞೆಯ ಡಿಕ್ರಿಯನ್ನು ಮಹದೇವಪ್ಪ ಅಂದರೆ ವಾದಿಯ ವಿರುದ್ಧ ಒ.ಎಸ್.ಸಂ.49/2000ದಲ್ಲಿ ಕೋರಲಾಗಿರುತ್ತದೆ.

4. ಸಂಬಂಧಪಟ್ಟ ದಾವೆಗಳಲ್ಲಿನ ಪ್ರತಿವಾದಿ(ಗಳು) ಲಿಖಿತ ಹೇಳಿಕೆ(ಗಳನ್ನು) ಸಲ್ಲಿಸಿ, ಪ್ರಕರಣಗಳನ್ನು ಪ್ರಶ್ನಿಸಿರುತ್ತಾರೆ. ಪಕ್ಷಕಾರರ ವಾದಗಳ ಉಲ್ಲೇಖದೊಂದಿಗೆ, ಈ ಮುಂದಿನ ವಿವಾದಾಂಶಗಳನ್ನು ಒ.ಎಸ್.ಸಂ.49/2000 ದಲ್ಲಿ ಪ್ರಸ್ತಾಪಿಸಲಾಗಿರುತ್ತದೆ:

1. ವಾದಿಯು ಸದರಿ ಸ್ವತ್ತಿನ ಮಾಲೀಕ ಮತ್ತು ಅಧಿಭೋಗದಾರನಾಗಿರುವುದರಿಂದ 25.04.2000ದಂದು 177/2000–01ನೇ ಸಂಖ್ಯೆಯನ್ನು ಹೊಂದಿರುವ ನೋಂದಾಯಿತ ಕ್ರಯ–ಪತ್ರದ ದಸ್ತಾವೇಜುಗಳಡಿಯಲ್ಲಿ ಯಾದಗಿರಿ (ಬಿ)ಯ ಸರ್ವೆ ಸಂ.150/1ರ ಜಮೀನಿನಲ್ಲಿರುವ 9 X 12 ಮೀಟರ್ (30' X 40') ಅಳತೆಯ ಫ್ಲಾಟ್ ಸಂ.2ನ್ನು ಹೊಂದಿರುವ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂಬುದನ್ನು ರುಜುವಾತುಪಡಿಸಿರುತ್ತಾರೆಯೇ?

2. ವಾದಿಯು, ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಸರಿಯಾದ ಸ್ವಾಮ್ಯ ಮತ್ತು ಹಿತಾಸಕ್ತಿ ಇರುವುದಿಲ್ಲವೆಂದು ಮತ್ತು ದಾವಾ ಸ್ವತ್ತಿನಿಂದ ವಾದಿಯನ್ನು ಕಳುಹಿಸಲು ಪೊಲೀಸ್ ಪ್ರಯತ್ನದ ನೆರವಿನೊಂದಿಗೆ ವಾದಿಯ ಸ್ವಾಮ್ಯವನ್ನು ನಿರಾಕರಿಸಲಾಗಿದೆಯೆಂಬುದನ್ನು, ಅಲ್ಲದೆ ವಾದಿಯ ಸ್ವತ್ತಿನ

ಮೇಲೆ ಮನೆ ನಿರ್ಮಿಸಲು ಪ್ರಯತ್ನಿಸಿದುದನ್ನು ಮತ್ತು ಪ್ರತಿವಾದಿಗಳ ಮಧ್ಯೆ ಪ್ರವೇಶಿಸುವಿಕೆಗಿನ ಕಾರಣಗಳನ್ನು ರುಜುವಾತುಪಡಿಸಿರುತ್ತಾನೆ?

3. ಪ್ರತಿವಾದಿಯು ದಾವಾ ಸ್ವತ್ತಿನ ಅಧಿಭೋಗದಲ್ಲಿದ್ದು, ಅದರ ಮೇಲೆ ನಿರ್ಮಾಣ ಕಾರ್ಯಕ್ಕೆ ಪ್ರಯತ್ನಿಸಲು ಪುರಸಭೆಯಿಂದ ಅನುಮತಿ ಪಡೆದು ದಾವ ಸ್ವತ್ತನ್ನು ಅನುಭವಿಸುತ್ತಿರುವುದ ರಿಂದ 12.12.1998ರಂದು ನೋಂದಾಯಿತ ಕ್ರಯ ಪತ್ರ ದಸ್ತಾವೇಜು ಸಂ.1398/98–99ರಡಿಯಲ್ಲಿ ಪ್ರತಿವಾದಿ ಸಂ.2 ರಿಂದ ಪ್ರತಿವಾದಿಯ ದಾವಾ ಸ್ವತ್ತನ್ನು ಖರೀದಿಸಿರುತ್ತಾ – ನೆಂಬುದನ್ನು ಆತ ರುಜುವಾತು ಪಡಿಸಿರುತ್ತಾನೆಯೇ?

4. ವಾದಿಯು ಸಂದಾಯ ಮಾಡಿರುವ ನ್ಯಾಯಾಲಯ ಶುಲ್ಕವು ಸಾಕಷ್ಟಾಗಿರುವುದಿಲ್ಲವೆಂಬುದನ್ನು ಪ್ರತಿವಾದಿಯು ರುಜುವಾತುಪಡಿಸಿರುತ್ತಾನೆಯೇ?

5. ವಾದಿಯು ಕೋರಿರುವ ಘೋಷಣೆ ಮತ್ತು ನಿರ್ಬಂಧಕಾಜ್ಞೆಗೆ ಹಕ್ಕುಳ್ಳವನಾಗಿರುತ್ತಾನೆಯೇ?

6. ಹಾಗಿದ್ದರೆ ಅದಕ್ಕಾಗಿ ಯಾವ ಡಿಕ್ರಿ ಮತ್ತು ಯಾವ ಆದೇಶ?

5. ಒ.ಎಸ್.ಸಂ.53/2000ದಲ್ಲಿ, ಈ ಮುಂದಿನ ವಿವಾದಾಂಶಗಳನ್ನು ಪ್ರಸ್ತಾಪಿಸಲಾಗಿರುತ್ತದೆ:

1. ವಾದಿಯು ದಾವೆಯ ದಿನಾಂಕದಂದು ಯಾದಗಿರಿ ತಾಲೂಕಿನ ಸರ್ವೆ ಸಂ.150/1ರ ಜಮೀನಿನಲ್ಲಿ 9 ಮೀ X 12ಎಂ = 108 ದ.ಮೀ.ಗಳ ಅಳತೆಯ ಸಂ.2ನ್ನು ಹೊಂದಿರುವ ಮುಕ್ತ ಫ್ಲಾಟ್‌ನ

ಮಾಲೀಕ ಮತ್ತು ಅಧಿಭೋಗದಾರನಾಗಿರುತ್ತಾನೆಂಬುದನ್ನು ರುಜುವಾತುಪಡಿಸಿರುತ್ತಾನೆಯೇ?

2. ವಾದಿಯು, ಪ್ರತಿವಾದಿಗಳು ಮಧ್ಯೆ ಪ್ರವೇಶಿಸಿರುತ್ತಾರೆಂಬುದನ್ನು ರುಜುವಾತುಪಡಿಸಿರುತ್ತಾರೆಯೇ?

3. ಅದಕ್ಕಾಗಿ ಯಾವ ಡಿಕ್ರಿ ಅಥವಾ ಆದೇಶ?

6. ಎರಡೂ ದಾವೆಗಳು ಒಂದೇ ಸ್ವತ್ತನ್ನು ಒಳಗೊಂಡಿದ್ದು, ಪಕ್ಷಕಾರರೂ ಸಹ ಅವರೇ ಆಗಿರುವುದರಿಂದ, ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವ ಮೂಲಕ ಅವುಗಳನ್ನು ಒಂದೆಡೆ ಸೇರಿಸಲಾಗಿರುತ್ತದೆ ಹಾಗೂ ಎರಡಕ್ಕೂ ಸಾಮಾನ್ಯ ಸಾಕ್ಷ್ಯವನ್ನು ಒ.ಎಸ್.ಸಂ.49/2000ದಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ವಾದಿ – ಮಹದೇವಪ್ಪ ಮೃತನಾಗಿರುವುದರಿಂದ, ದಾಖಲೆಯಲ್ಲಿರುವ ಆತನ ಕಾನೂನು ಸಮ್ಮತ ವಾರಸುದಾರರು ಒ.ಎಸ್.ಸಂ.49/2000ವನ್ನು ಪ್ರಾಸಿಕ್ಯೂಟ್ ಮಾಡಿ, ಒ.ಎಸ್.ಸಂ.53/2000ವನ್ನು ಪ್ರಶ್ನಿಸಿರುತ್ತಾರೆ. ಪಿ.ಡಬ್ಲ್ಯೂ–1 ರಿಂದ 3 ರ ವರೆಗಿನವರು ಸಾಕ್ಷ್ಯ ನೀಡಿರುತ್ತಾರೆ. ನಿಶಾನೆ ಪಿ.1 ರಿಂದ ಪಿ 9 ಗಳನ್ನು ಮಹದೇವಪ್ಪನು ದಾವಾ ಸ್ವತ್ತಿಗೆ ಮಾಡಿದ ಕ್ಲೇಮಿನ ಆಧಾರವಾಗಿ ಗುರುತುಮಾಡಿಕೊಳ್ಳಲಾಗಿರುತ್ತದೆ. ಒ.ಎಸ್.ಸಂ.53/2000 ದಲ್ಲಿ ಮಾಡಿರುವ ಕ್ಲೇಮಿನ ಆಧಾರದಲ್ಲಿ, ಶ್ರೀಯುತ ಉದಯ್ ಕುಮಾರ್ ಸ್ವತಃ ಡಿ.ಡಬ್ಲ್ಯು.1 ಎಂದು ಪರಿಶೀಲನೆಗೊಳಪಟ್ಟಿರುತ್ತಾರೆ. 2 ರಿಂದ 5 ರ ವರೆಗಿನ ಡಿ.ಡಬ್ಲ್ಯು. ಗಳನ್ನು ಪರಿಶೀಲನೆಗೊಳಪಟ್ಟಿರುತ್ತಾರೆ. ಡಿ1 ರಿಂದ ಡಿ 10ರ ವರೆಗಿನ ನಿಶಾನೆಗಳನ್ನು ಗುರುತು ಮಾಡಲಾಗಿರುತ್ತದೆ.

7. ಪಕ್ಷಕಾರರು ಮಂಡಿಸಿದ ಮೌಕಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳನ್ನು ಅವುಗಳ ಗುಣಾವಗುಣಗಳ ಮೇಲಿನ ವಿವೇಚನೆಯಿಂದ, ಅಧಿವಿಚಾರಣಾ ನ್ಯಾಯಾಲಯವು, ಮೃತ ಮಹದೇವಪ್ಪನ ಕಾನೂನು ಸಮ್ಮತ ವಾರಸುದಾರರು, ದಾವಾ ಸ್ವತ್ತಿನ ಮೇಲಿನ ಅಧಿಭೋಗವನ್ನು ಮತ್ತು ಪ್ರತಿವಾದಿ ಸಂ.2 ಪ್ರತಿವಾದಿ

ಸಂ.1ರ ಹೆಸರಿನಲ್ಲಿ 15.12.1998ರಂದು ಬರೆಸಲಾಗಿರುವ ಕ್ರಯಪತ್ರವು ಹಸ್ತಾಂತರಿಸಲು ಯಾವುದೇ ಸ್ವಾಮ್ಯವನ್ನು ಹೊಂದಿರುವುದಿಲ್ಲವೆಂದು ಮತ್ತು ಮಹದೇವಪ್ಪನ ಹೆಸರಿನಲ್ಲಿ 25.04.2000ರಂದು ಕ್ರಯಪತ್ರವನ್ನು ಕಾರ್ಯರೂಪಕ್ಕೆ ತರಲಾಗಿದೆಯೆಂಬುದನ್ನು ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ಅಭಿಪ್ರಾಯಪಟ್ಟಿರುತ್ತಾರೆ. ಉದಯ್ ಕುಮಾರ್ ಟಿಎಂಸಿ ರಿಜಿಸ್ಟರ್‌ನಲ್ಲಿ ತನ್ನ ಹೆಸರಿಗೆ ಬದಲಾಯಿಸಿಕೊಂಡು, ದಾವಾ ಸ್ವತ್ತಿನ ಮೇಲೆ, ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದು ಮನೆಯನ್ನು ಕಟ್ಟಿಸಿರುವುದು ಕಂಡು ಬರುತ್ತದೆ. ದಿನಾಂಕ 15.12.1998ರಂದು ಪ್ರತಿವಾದಿ ಸಂ.1ರ ಹೆಸರಿನಲ್ಲಿ ಪ್ರತಿವಾದಿ ಸಂ.2 ಅನುಷ್ಠಾನಗೊಳಿಸಿದ ಕ್ರಯಪತ್ರವನ್ನು ರದ್ದುಗೊಳಿಸಲು ಕೋರಿಲ್ಲದಿರುವುದು, ಘೋಷಣೆ ಮತ್ತು ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುವುದು ಊರ್ಜಿತವಾಗಿರುವುದಿಲ್ಲವೆಂದು ಮತ್ತು ಪ್ರಕರಣವು ವಜಾಗೊಂಡಿರುತ್ತದೆಂದು ಅಭಿಪ್ರಾಯಪಟ್ಟಿರುವುದು ಕಂಡು ಬರುತ್ತದೆ. ಒ.ಎಸ್.ಸಂ.53/2000ದಲ್ಲಿನ ವಾದಿಯನ್ನು ಪ್ರತಿವಾದಿ ಸಂ.1 ಎಂದು ಪರಿಗಣಿಸಿದ ಉದಯ್ ಕುಮಾರ್ ರವರ ಅಂದರೆ ಸಾಮಾನ್ಯ ಸಾಕ್ಷ್ಯವನ್ನು ದಾವೆಗಳಲ್ಲಿ ದಾಖಲಿಸಲಾಗಿದೆ ಎಂಬ ಕಾರಣದ ಮೇಲೆ ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದ ಡಿಕ್ರಿಯನ್ನು ಹೊರಡಿಸಲಾಗಿದೆ ಎಂಬುದು ಸಾಬೀತಾಗಿರುವುದು ಕಂಡುಬರುತ್ತದೆ.

8. ಮೃತ ವಾದಿ – ಮಹದೇವಪ್ಪನ ಕಾನೂನು ಸಮ್ಮತ ವಾರಸುದಾರರು ಸಲ್ಲಿಸಿದ ಅಪೀಲುಗಳ ಮೇಲೆ, ಯಾದಗಿರಿಯಲ್ಲಿನ ಹಿರಿಯ ಸಿವಿಲ್ ನ್ಯಾಯಾಧೀಶರು, ಪರಿಗಣೆಗಾಗಿ ಈ ಮುಂದಿನ ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ.

1. ಅಧಿವಿಚಾರಣಾ ನ್ಯಾಯಾಲಯವು ಒ.ಎಸ್.ಸಂ.49/00 ದಲ್ಲಿನ ವಾದಿಯು, ತಾನೇ ದಾವಾ ಸ್ವತ್ತಿನ ಮಾಲೀಕನೆಂದು ಮತ್ತು ವಾಸ್ತವಿಕ ಅಧಿಭೋಗದಲ್ಲಿದ್ದೇನೆಂದು ರುಜುವಾತುಪಡಿಸಲು ವಿಫಲನಾಗಿದ್ದಾನೆಂದು ಅಭಿಪ್ರಾಯಪಟ್ಟಿರುವುದು, ಸಮರ್ಥನೀಯವಾದುದಾಗಿರುತ್ತದೆಯೇ?

2. ಅಧಿವಿಚಾರಣಾ ನ್ಯಾಯಾಲಯವು, ಒ.ಎಸ್.ಸಂ.53/00 ದಲ್ಲಿನ ವಾದಿಯು, ತಾನೇ ದಾವಾ ಸ್ವತ್ತಿನ ವಾಸ್ತವಿಕ ಅಧಿಭೋಗದಲ್ಲಿದ್ದೇನೆಂದು ರುಜುವಾತುಪಡಿಸಿರುತ್ತಾನೆಂದು ಅಭಿಪ್ರಾಯಪಟ್ಟಿರುವುದು. ಸಮರ್ಥನೀಯವಾದುದಾಗಿರುತ್ತದೆಯೇ?

3. ಅಧಿವಿಚಾರಣಾ ನ್ಯಾಯಾಲಯವು ಒ.ಎಸ್.ಸಂ.49/00ದಲ್ಲಿನ ವಾದಿಯು ದಾವೆಯಲ್ಲಿ ಕೋರಿರುವ ಪರಿಹಾರಗಳಿಗೆ ಹಕ್ಕುಳ್ಳವನಾಗಿರುವುದಿಲ್ಲವೆಂದು ಹಾಗೂ ಒ.ಎಸ್.ಸಂ. 53/00ರಲ್ಲಿನ ವಾದಿಯು, ದಾವೆಯಲ್ಲಿ ಕೋರಿರುವ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುವುದು, ಸಮರ್ಥನೀಯವಾದುದಾಗಿರುತ್ತದೆಯೇ?

4. ಅಪೀಲಿನ ಮೇರೆಗೆ ನೀಡಲಾಗಿರುವ ತೀರ್ಪು ಮತ್ತು ಡಿಕ್ರಿ ಮಧ್ಯೆ ಪ್ರವೇಶ ಅಗತ್ಯವಿದೆಯೇ?

5. ಯಾವ ಆದೇಶ?

9. ಪಕ್ಷಕಾರರು ನೀಡಿದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಹೊಸ ನಿರ್ಧರಣೆ ಮತ್ತು ವಿವೇಚನೆಯ ಮೇಲೆ ಅಪೀಲು ನ್ಯಾಯಾಧೀಶರು, ಅಧಿವಿಚಾರಣಾ ನ್ಯಾಯಾಧೀಶರು ದಾಖಲು ಮಾಡಿದ ತೀರ್ಪುಗಳನ್ನು ಸಹಮತಿಸಿ, ತತ್ಪರಿಣಾಮವಾಗಿ, ಎರಡೂ ಅಪೀಲುಗಳನ್ನು ವಜಾಗೊಳಿಸಿರುತ್ತಾರೆ.

10. ಸದರಿ ಸಾಮಾನ್ಯ ತೀರ್ಪುಗಳು ಮತ್ತು ಪ್ರತ್ಯೇಕ ಡಿಕ್ರಿ(ಗಳು)ಗಳನ್ನು ನಿರಾಕರಿಸಿ, ಈ ಎರಡೂ ಅಪೀಲುಗಳನ್ನು ಸಲ್ಲಿಸಲಾಗಿರುತ್ತದೆ.

11. ಅಪೀಲುದಾರರ ಪರ ಮಾನ್ಯ ವಕೀಲರಾದ ಶ್ರೀ ಅಶೋಕ ಎಸ್. ಕಿನಗಿ ಯವರು, ಅಧೀನ ನ್ಯಾಯಾಲಯಗಳು, ಪ್ರತಿವಾದಿ ಸಂ.1ರ ಹೆಸರಿನಲ್ಲಿ 15.12.1998ರಂದು ಕ್ರಯಪತ್ರ ಮಾಡಿಕೊಟ್ಟ ಸ್ವಲ್ಪ ಮೊದಲೇ ಮಹದೇವಪ್ಪನ ಹೆಸರಿನಲ್ಲಿ ಪ್ರತಿವಾದಿ ಸಂ.2 ಬರೆದುಕೊಟ್ಟ 23.07.1998ನೇ ದಿನಾಂಕದ ಮಾರಾಟದ ಒಪ್ಪಂದವನ್ನು ಪರಿಗಣಿಸದೆ ಕಾನೂನು ಬಾಹಿರತೆಯನ್ನು ಎಸಗಿರುತ್ತದೆಂದು ವಾದಿಸಿರುತ್ತಾರೆ. ಪ್ರತಿವಾದಿ ಸಂ.1 ಮೌಲ್ಯಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕ ಖರೀದಿದಾರನಾಗಿರದೆ, ನೋಟೀಸನ್ನು ನೀಡದೆ, ಮಹದೇವಪ್ಪ ಸಲ್ಲಿಸಿರುವ ದಾವೆಯನ್ನು ವಜಾ ಮಾಡಿ, ಉದಯ್ ಕುಮಾರ್ ಹೆಸರಿನಲ್ಲಿ ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದ ಡಿಕ್ರಿಯನ್ನು ಹೊರಡಿಸಿರುವುದು, ಕಾನೂನು ಬಾಹಿರವಾಗಿದ್ದು, ಕಾನೂನಿನ ಸಾರಭೂತವಾದ ಪ್ರಶ್ನೆ ಪರಿಗಣನೆಗಾಗಿ ಉದ್ಭವಿಸುವುದಿಲ್ಲ. ಹಾಗಾಗಿ, ಎರಡನೇ ಅಪೀಲು(ಗಳು) ಊರ್ಜಿತವಾಗಿರುತ್ತವೆಂದೂ ವಾದಿಸಿರುತ್ತಾರೆ.

12. ಪ್ರತ್ಯರ್ಜಿದಾರರ ಸಂ.1ರವರ ಪರವಾಗಿ ಮಾನ್ಯ ವಕೀಲರಾದ ಶ್ರೀ ಅಮಿತ್ ಕುಮಾರ್ ದೇಶಪಾಂಡೆ ಯವರು, ಮತ್ತೊಂದು ರೀತಿಯಲ್ಲಿ ಎರಡೂ ಅಧೀನ ನ್ಯಾಯಾಲಯಗಳು ಸೂಕ್ತ ಸಾಕ್ಷ್ಯವನ್ನು ಹಾಗೂ ವಸ್ತುತಃ ವಾಸ್ತವಾಂಶಗಳಾಗಿರುವಂಥ ಸೂಕ್ತ ಸಾಕ್ಷ್ಯ ಮತ್ತು ದಾಖಲಾದ ನಿರ್ಣಯಗಳನ್ನು ಪರಿಗಣಿಸಿರುತ್ತದೆಂದು ವಾದಿಸಿರುತ್ತಾರೆ. ಅವರು ವಿಷಯದ ಅಂತಿಮ ನ್ಯಾಯಾಲಯವಾಗಿರುವಂಥ ಅಧೀನ ನ್ಯಾಯಾಲಯವು ಪ್ರತ್ಯರ್ಜಿದಾರ ಸಂ.1 ರವರೊಂದಿಗೆ ದಾವಾ ಸ್ವತ್ತಿನ ಸ್ವಾಮ್ಯ ಮತ್ತು ಅಧಿಭೋಗಕ್ಕೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ದೃಢೀಕರಿಸಿ, ಶಂಕೆಯಿಂದಾಗಲೀ ಇಲ್ಲವೇ ಊಹೆಯಿಂದಾಗಲೀ, ಅಲ್ಲದೆ ಯಾವುದೇ ವ್ಯತಿರಿಕ್ತ ಪರಿಣಾಮದಿಂದಾಗಲೀ ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಪರಿಮಿತ ಅಧಿಕಾರವ್ಯಾಪ್ತಿಯೊಂದಿಗೆ ಮಧ್ಯೆ ಪ್ರವೇಶಿಸುವುದು ತಕ್ಕುದಾಗಿರುವುದಿಲ್ಲವೆಂದೂ ನಿವೇದಿಸಿಕೊಂಡಿರುತ್ತಾರೆ. ಇವರು ಪ್ರಶ್ನಿತ ತೀರ್ಪುಗಳು ಕಾನೂನಿನ ಯಾವುದೇ ಮುಖ್ಯವಾದ ಪ್ರಶ್ನೆಗಳು ಉದ್ಭವಿಸಲು ಅವಕಾಶ ಮಾಡಿಕೊಡುವುದಿಲ್ಲವೆಂದೂ ಹಾಗಾಗಿ, ಎರಡನೇ ಅಪೀಲು(ಗಳು) ಊರ್ಜಿತವಾಗದೆ ತಿರಸ್ಕರಿಸಲು ತಕ್ಕವಾಗಿವೆಯೆಂದು ನಿವೇದಿಸಿಕೊಂಡಿರುತ್ತಾರೆ.

13. ದಾಖಲೆಗಳನ್ನು ಪರಿಶೀಲಿಸಿ, ವಾದ ವಿವಾದಗಳನ್ನು ಪರಿಗಣಿಸಿರುತ್ತೇವೆ.

14. ದಾವಾ ಸ್ವತ್ತು ಪ್ರತಿವಾದಿ ಸಂ.2ಕ್ಕೆ ಸೇರಿದುದಾಗಿರುತ್ತದೆ ಎಂಬ ವಾಸ್ತವಾಂಶಗಳಲ್ಲಿ ಯಾವುದೇ ವಿವಾದವಿರುವುದಿಲ್ಲ. ಈತ ಪ್ರತಿವಾದಿ ಸಂ.1ರವರ ಹೆಸರಿನಲ್ಲಿ 15.12.1998ರಂದು ಇದನ್ನು ಮಾರಾಟ ಮಾಡಿ, ಅಧಿಭೋಗವನ್ನು ಬಿಟ್ಟುಕೊಟ್ಟಿರುತ್ತಾನೆ. ಸ್ವತ್ತಿನ ಮೂಲ ಸ್ವಾಮ್ಯ ಪತ್ರವನ್ನು ಹಸ್ತಾಂತರಿಸಲಾಗಿರುತ್ತದೆ. ಮಾರಾಟವನ್ನು ಅನುಸರಿಸಿ, ಖಾತಾವನ್ನು ಸಹ ಪ್ರತಿವಾದಿ ಸಂ.1 ರವರ ಹೆಸರಿಗೆ ವರ್ಗಾಯಿಸಲಾಗಿರುತ್ತದೆ. ಈತ ಕಟ್ಟಡ ನಿರ್ಮಾಣಕ್ಕಾಗಿ ಅನುಮತಿ ಪಡೆದುಕೊಂಡಿದ್ದು, ಕಟ್ಟಡದ ನಿರ್ಮಾಣವನ್ನು ಆರಂಭಿಸಿರುತ್ತಾನೆ. ಕಟ್ಟಡವನ್ನು ಪೂರ್ಣಗೊಳಿಸುವ ವಿಷಯದಲ್ಲಿ ತಡೆಉಂಟಾಗಿರುವುದರಿಂದ ಉದಯ್ ಕುಮಾರ್ ದಾವೆಯನ್ನು ಹೂಡಿದ್ದು, ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿರುತ್ತದೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸಿರುವ ಆದೇಶವನ್ನು ನಿರಾಕರಿಸಿ ಮಹದೇವಪ್ಪ ಸಲ್ಲಿಸಿದ 2000ದ ಎಂ.ಎ.ಸಂ.5 ಮತ್ತು 6ನ್ನು 21.3.2002ರಂದು ನಿರುಪಾಧಿಕವಾಗಿ ವಜಾಗೊಳಿಸಿರುತ್ತಾರೆ. ಇದನ್ನು ಪ್ರಶ್ನಿಸಿದಾಗ, 01.07.2002ನೇ ದಿನಾಂಕದ ಆದೇಶದ ಮೇರೆಗೆ 2002ರ ಸಿಆರ್‌ಪಿ ಸಂ.1618 ಮತ್ತು 1620ರಲ್ಲಿ ಎತ್ತಿಹಿಡಿಯಲಾಗಿದೆ.

15. ಪ್ರತಿವಾದಿ ಸಂ.2, 25.04.2000ದಂದು ವಾದಿಯ ಹೆಸರಿನಲ್ಲಿ ದಾವಾ ಸ್ವತ್ತನ್ನು (ಪ್ರತಿವಾದಿ ಸಂ.2 ಈಗಾಗಲೇ ಮಾರಾಟ ಮಾಡಿ, ಉದಯ್ ಕುಮಾರ್ ಹೆಸರಿಗೆ ಬರೆದಿದ್ದ) ಮಾರಾಟ ಮಾಡಿರುತ್ತಾನೆ. ಪ್ರತಿವಾದಿ ಸಂ.2, ಪ್ರತಿವಾದಿ ಸಂಖ್ಯೆ 1ರ ಹೆಸರಿನಲ್ಲಿ ಈಗಾಗಲೇ ಮಾಡಿರುವ ಕ್ರಯ ಪತ್ರವನ್ನು ಪ್ರಶ್ನಿಸಲಾಗಿರುವುದಿಲ್ಲ. ಅಧೀನ ನ್ಯಾಯಾಲಯಗಳು, ಸದರಿ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಮೃತವಾದಿ/ ಅಪೀಲುದಾರನ ಕಾನೂನುಸಮ್ಮತ ವಾರಸುದಾರರ ವಿರುದ್ಧ ಅನುಕ್ರಮವಾಗಿ ದಾವೆಗಳು ಮತ್ತು ಅಪೀಲು(ಗಳು)ಗಳನ್ನು ನಿರ್ಣಯಿಸಲಾಗಿರುತ್ತದೆ.

16. ಸ್ವತ್ತಿನ ಅಧಿನಿಯಮ, 1882ರ 48ನೇ ಪ್ರಕರಣವು, ಅನುಕ್ರಮದ ವರ್ಗಾವಣೆಗಳಾದಾಗ, ಆದ್ಯತೆಯನ್ನು ಗೊತ್ತುಪಡಿಸುತ್ತವೆ. ಉಪಬಂಧವು ಯಾರೇ ವ್ಯಕ್ತಿಯು, ಯಾರೇ ಒಬ್ಬ ವ್ಯಕ್ತಿಯು, ತಾನು ಸ್ವತಃ ಏನನ್ನು ಪಡೆಯುತ್ತಾನೋ ಅದಕ್ಕಿಂತ ಹೆಚ್ಚಿನ ಸ್ವಾಮ್ಯವನ್ನು ಪಡೆಯುವುದಿಲ್ಲವೆಂಬ ಮುಖ್ಯವಾದ ತತ್ವವನ್ನು ಒಳಗೊಂಡಿರುತ್ತದೆ. ಒಬ್ಬ ವ್ಯಕ್ತಿಯು ಸ್ವತ್ತಿನ ವರ್ಗಾವಣೆಗೆ ತೊಂದರೆ ಉಂಟು ಮಾಡಿದಲ್ಲಿ, ಆ ತರುವಾಯ ಕಾನೂನಿನಲ್ಲಿ, ಈತ, ತೊಂದರೆ ಉಂಟು ಮಾಡಿದ್ದ ಮೊದಲ ವರ್ಗಾವಣೆಯಿಂದ ಈಗಾಗಲೇ ಸೃಜಿಸಲಾದ ಹಕ್ಕುಗಳನ್ನು ನಿರಾಕರಿಸಿ ಆತನಿಂದ ಈಗಾಗಲೇ ವರ್ಗಾವಣೆಗೊಂಡ ಸ್ವತ್ತಿನೊಂದಿಗೆ ವ್ಯವಹರಿಸಲಾಗುವುದಿಲ್ಲ.

17. ಪ್ರಸ್ತುತ ಪ್ರಕರಣದಲ್ಲಿ, ಪ್ರತಿವಾದಿ ಸಂ.1ರ ಹೆಸರಿನಲ್ಲಿ 15.12.98ರಂದು ದಾವಾ ಸ್ವತ್ತನ್ನು ವರ್ಗಾವಣೆ ಮಾಡಿ ತೊಂದರೆಗೆ ಒಳಗಾಗಿರುವ ಪ್ರತಿವಾದಿ ಸಂ.2, ಸ್ವಾಮ್ಯದ ಮೂಲ ಪತ್ರ ಹಾಗೂ ಸ್ವತ್ತಿನ ಅಧಿಭೋಗವನ್ನು ಬಿಟ್ಟುಕೊಟ್ಟಿರುತ್ತಾನೆ. ವಾದಿಯು ಇದೇ ಸ್ವತ್ತಿನ ಸಂಬಂಧದಲ್ಲಿ 25.4.2000ದಂದು ಜಾರಿಗೊಳಿಸಿದ ತರುವಾಯದ ಕ್ರಯಪತ್ರದ ಅನುಸರಣೆಯಲ್ಲಿ ಸ್ವಾಮ್ಯ ಅಥವಾ ಅಧಿಭೋಗವನ್ನು ಆರ್ಜಿಸಿಕೊಳ್ಳಲಾಗುವುದಿಲ್ಲ. ಪ್ರತಿವಾದಿ ಸಂ.1 ಈಗಾಗಲೇ, ದಾವಾ ಸ್ವತ್ತಿನಲ್ಲಿ ಹಕ್ಕು, ಸ್ವಾಮ್ಯ ಹಾಗೂ ಹಿತಾಸಕ್ತಿಯನ್ನು ಹೊಂದಿರುವುದರಿಂದ ವಾದಿಯ ಹೆಸರಿನಲ್ಲಿ ಅಂದರೆ ಸದರಿ ಸ್ವತ್ತಿನ ಸಂಬಂಧದಲ್ಲಿ 25.4.2000ದಂದಿನ ಕ್ರಯಪತ್ರದ ಅನುಷ್ಠಾನಗೊಳಿಸಿರುವುದು ವಾದಿಯಲ್ಲಿ ಯಾವುದೇ ಕಾನೂನಾತ್ಮಕ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಪ್ರದತ್ತಗೊಳಿಸಿರುವುದಿಲ್ಲ. ವಾದಿಯು ಹಿಂದಿನ ಸ್ವಾಮ್ಯ ಪತ್ರವನಾಗಲೀ ಇಲ್ಲವೇ ಸ್ವತ್ತಿನ ಅಧಿಭೋಗವನ್ನಾಗಲೀ ಹೊಂದಿರುವುದಿಲ್ಲ. 23.7.98ರ ನೋಂದಣಿ ಮಾಡದ ಕ್ರಯಪತ್ರವು ಮಹದೇವಪ್ಪನ ಹೆಸರಿನಲ್ಲಿ ಯಾವುದೇ ಹಕ್ಕು ಅಥವಾ ಸ್ವಾಮ್ಯವನ್ನು ಸೃಜಿಸುವುದಿಲ್ಲ. ಇದೊಂದು ಕೇವಲ ಜಾರಿಗೊಳಿಸಬಹುದಾದ ದಸ್ತಾವೇಜಾಗಿರುತ್ತದೆ.

18. ದಾವಾ ಸ್ವತ್ತಿನ ಅಧಿಭೋಗ ಮತ್ತು ಅನುಭವಿಸುವ ಪ್ರಶ್ನೆಯು ವಾಸ್ತವಾಂಶಗಳಲ್ಲಿ ಮುಖ್ಯವಾದ ಅಂಶವೇ ಆಗಿರುತ್ತದೆ. ದಾಖಲೆ ಮೇಲಿನ

ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯದ ವಿವೇಚನೆಯ ಮೇಲೆ, ಅಧಿವಿಚಾರಣಾ ನ್ಯಾಯಾಲಯವು ದಾವಾ ಸ್ವತ್ತಿನ ಸ್ವಾಮ್ಯ ಮತ್ತು ಅಧಿಭೋಗವು ಪ್ರತಿವಾದಿ ಸಂ.1 ರೊಂದಿಗಿರುತ್ತದೆಂದು ಇಬ್ಬರೂ ಪಕ್ಷಕಾರರು ನೀಡಿದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಆಧರಿಸಿದ ವಾದಿಯ ವಾದ ಹಾಗೂ ದಾಖಲಾದ ಧನಾತ್ಮಕ ತೀರ್ಮಾನಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿರುತ್ತದೆ. ವಾಸ್ತವಾಂಶದ ಅಂತಿಮ ನ್ಯಾಯಾಲಯವಾಗಿರುವಂಥ ಅಧೀನ ಅಪೀಲು ನ್ಯಾಯಾಲಯವು, ಪಕ್ಷಕಾರರು ನೀಡಿದ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯದ ಹೊಸ ನಿರ್ಧರಣೆಯ ಮೇಲೆ, ದಾವಾ ಸ್ವತ್ತಿನ ಮೇಲೆ ಪ್ರತಿವಾದ ಸಂ.1ರ ಸ್ವಾಮ್ಯ ಮತ್ತು ಅಧಿಭೋಗಕ್ಕೆ ಸಂಬಂಧಿಸಿದ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ಸ್ಥಿರೀಕರಿಸಿ, ಮಹದೇವಪ್ಪನ ದಾವೆಯನ್ನು ವಜಾಗೊಳಿಸಿ, ಉದಯ ಕುಮಾರ್‌ನ ದಾವೆಯನ್ನು ಡಿಕ್ರಿ ಮಾಡಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿರುತ್ತದೆ. ನಂಬಲರ್ಹ ಸಾಕ್ಷ್ಯಗಳ ಬೆಂಬಲದಿಂದ ಅಧೀನ ನ್ಯಾಯಾಲಯಗಳು ದಾಖಲಿಸಿರುವ ನಿರ್ಣಯಗಳು ವ್ಯತಿರಿಕ್ತವಾಗಿವೆಯೆಂದಾಗಲೀ ಅಥವಾ ಕಾನೂನು ಬಾಹಿರವಾಗಿವೆಯೆಂದಾಗಲೀ ಅರ್ಥವನ್ನು ಪಡೆದುಕೊಳ್ಳುವುದಿಲ್ಲ. ಅದು ಸಾಕ್ಷ್ಯವನ್ನು ತಪ್ಪಾಗಿ ಓದಿಕೊಂಡದ್ದರಿಂದಲೋ ಇಲ್ಲವೇ ಯಾವುದೇ ಸೂಕ್ತ ಸಾಕ್ಷ್ಯವನ್ನು ಪರಿಗಣಿಸದೆ ಬಿಟ್ಟು ಬಿಟ್ಟದ್ದರಿಂದಲೋ ಆಗುವಂಥದ್ದಾಗಿರುತ್ತದೆ. ಹಾಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದಡಿಯಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಅಧೀನ ನ್ಯಾಯಾಲಯಗಳು ದಾಖಲಿಸಿರುವ ಸಮವರ್ತಿ ನಿರ್ಣಯಗಳೊಂದಿಗೆ ಮಧ್ಯೆ ಪ್ರವೇಶಿಸುವ ಯಾವುದೇ ವ್ಯಾಪ್ತಿಯಿರುವುದಿಲ್ಲ.

ಈ ಅಪೀಲುಗಳು ಕಾನೂನಿನ ಯಾವುದೇ ಮುಖ್ಯವಾದ ಪ್ರಶ್ನೆಗಳನ್ನು ಒಳಗೊಂಡಿರುವುದಿಲ್ಲವಾದ್ದರಿಂದ ಇವುಗಳು ನಿರಾಕರಿಸತಕ್ಕದ್ದಾಗಿರುತ್ತವೆ. ತದನುಸಾರವಾಗಿ ಆದೇಶಿಸಲಾಗಿರುತ್ತದೆ.